Sri S. A. PATIL.—May I know whether any misappropriation cases are pending in the Criminal Courts ?

Sri S. M. KRISHNA.—I want notice to answer this supplementary question.

ಶ್ರೀ ಜಿ. ಪುಟ್ಟಸ್ವಾಮಿ.—ಇಲ್ಲಿ ಒಬ್ಬರು ಅಧಿಕಾರಿಗಳನ್ನು ನೇಮಿಸಿದ್ದೀರಿ ಎಂದು ಹೇಳಿದಿರಿ. ಇವರ ಹೆಸರೇನು ? ಮತ್ತು ಯಾವಾಗ ಇವರನ್ನು ನೇಮಕ ಮಾಡಲಾಯಿತು !

ಶ್ರೀ ಎಸ್. ಎಂ. ಕೃಷ್ಣ.—ಯಾವಾಗ ನೇಮಕ ಮಾಡಿದೆ ಎನ್ನುವ ಸರಕಾರದ ಆರ್ಡರು ಈಗ ನನ್ನಲ್ಲಿಲ್ಲ. ನಿವೃತ್ತ ಐ. ಎ. ಎಸ್. ಅಧಿಕಾರಿ ಶ್ರೀಮಾನ್ ವೈ. ಹೊಂಬಾಳಯ್ಯ, ಎನ್ನುವವರನ್ನು ಇಲ್ಲಿಗೆ ತನಿಖಾಧಿಕಾರಿಗಳೆಂದು ನೇಮಕ ಮಾಡಲಾಗಿದೆ.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಇದರಲ್ಲಿ ಸುಮಾರು 6.13ಲಕ್ಷ ರೂಪಾಯಿಗಳು ದುರುಪಯೋಗವಾಗಿವೆ ಎಂದು ಹೇಳಿರುವುದಿಲ್ಲ ಸುಮಾರು 10—16 ಪರ್ಸ್ ಕೋರ್ಟುಗಳಲ್ಲಿ ಕೇಸುಗಳಾಗಿವೆ. ಇವುಗಳಲ್ಲಿ ಎಷ್ಟೋ ನಷ್ಟಗಳಾಗಿವೆ. ಇದರ ಜೊತೆಗೆ ಯಾರು ಇದರಲ್ಲಿ ದುರುಪಯೋಗ ಮಾಡಿದ್ದರೋ ಅಂತಹವರನ್ನೇ ಮತ್ತೆ ಬೋರ್ಡಿನವರು ಇಲ್ಲಿ ನೇಮಕ ಮಾಡಿರುತ್ತಾರೆ. ಇದಲ್ಲದೆ ಸಹಕಾರ ಸಂಘಗಳಲ್ಲೂ ಇಂತಹವರನ್ನು ನೇಮಕಮಾಡಿದ್ದಾರೆ. ಈಗ ನೇಮಕ ಮಾಡಿರುವ ಸಮಿತಿಗೆ ಇವನ್ನೆಲ್ಲಾ ಪರಿಶೀಲನೆ ಮಾಡುವುದಕ್ಕೆ ಪ್ರತಿಯೊಬ್ಬರಿಗೂ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಯಾವುದಾದರೂ ನಿರ್ದಿಷ್ಟವಾದ ವಿಚಾರಗಳಿದ್ದರೆ ಅವನ್ನು ತನಿಖಾಧಿಕಾರಿಗಳಿಗೆ ತಿಳಿಸಬಹುದು. ಅಂತಹ ವಿವರಗಳನ್ನು ನಮಗೆ ಕಳುಹಿಸಿ ಕೊಟ್ಟರೆ ನಾವು ಅದನ್ನು ತನಿಖಾಧಿಕಾರಿಗಳಿಗೆ ಕಳುಹಿಸಿಕೊಡುತ್ತೇವೆ ಮತ್ತು ಖಾದಿ ಮಂಡಲಿಯ ಅಧ್ಯಕ್ಷರಿಗೂ ಕಳುಹಿಸಿಕೊಡುತ್ತೇವೆ.

ಅಧ್ಯಕ್ಷರು.—ಪ್ರಶ್ನೆ ನಂ. 556ನ್ನು ತಡೆಹಿಡಿಯಲಾಗಿದೆ. ಈಗ ಶ್ರೀ ಪಿ. ಎ. ಪಾವಷೆ ಯವರು ಶ್ರೀ ಸರ್‌ದೇಸಾಯಿಯವರ ಪ್ರಶ್ನೆ 561ನ್ನು ಕೇಳಬಹುದು.

RELEASE OF WASTE LAND IN KHANAPUR TALUK

561. Sri P. A. PAWASHE (Uchagaon) [on behalf of Sri N. B. Sirdesai (Khanapur)].—

Will the Minister for Revenue be pleased to state :—

(*a*) the total acreage of Revenue waste land granted to landless persons in Khanapur Taluk since 1967 on the recommendation of the Consultative Committee for the disposal of land grant cases, and the extent of land granted without the recommedation of the said Committee ;

(*b*) the total acreage for which parties (Grantees) have paid measurement fees and out of the total acreage, the acreage of which the Assistant Superintendent of Land Records has effected measurement to this date ?

Sri N. HUTCHAMASTHY GOWDA (Minister for Revenue).—

(*a*) Area granted to landless persons on recommendations of the Consultative Committee.

Acres Guntas
2285—33

Area granted without the recommendation of the Committee (*i. e.*, to Ex-Serviceman and Soldiers).

Acres Guntas
315—16

(*b*) Measurement fee credited

Cases	*Area*
	As. Gs.
391	1,239-00

Measurement work carried out

Cases	*Area*
	As. Gs.
135	699-00

(*c*) An area of 175 acres and 21 guntas is available and this area is reserved for being granted to the ex-servicemen of the entire district and Scheduled Caste and Scheduled Tribes in Khanapur Taluk. Delay in disposal and release of these lands is due to the fact that the area is situated in interior tracts surrounded by forest and hence applicants hesitate to select these areas.

Sri P. A. PAWASHE.—May I know the reasons for the delay in measuring the land even though the grantees have remitted the required fees ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಭೂಮಿ ಕಾಡಿನ ಮಧ್ಯದಲ್ಲಿರುವುದರಿಂದ ಅಳತೆ ಮಾಡಿ ಬಿಲೇ ಮಾಡುವುದರಲ್ಲಿ ಕೆಲವು ಜನರಿಗೆ ಸ್ವಲ್ಪ ವಿಳಂಬವಾಗಿದೆ ಎಂದು ತಿಳಿದು ಬಂದಿದೆ.

Sri P. A. PAWASHE.—Whether the Government is aware that since the lands are not measured, the very purpose for which the lands are granted has been defeated because the grantees are not in a position to cultivate the land unless the lands are measured ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ನಿಜ, ಕೆಲವರಿಗೆ ತೊಂದರೆಯಾಗಿದೆ. ಇದಕ್ಕಾಗಿ ಸರ್ವೇಯರುಗಳನ್ನು ಕಳುಹಿಸಿ ಸ್ಪೆಷಲ್ ಸಿಬ್ಬಂದಿ ಕೊಟ್ಟು ಈ ಕೆಲಸವನ್ನು ಬೇಗನೆ ಮಾಡಲು ಪ್ರಯತ್ನ ಮಾಡುತ್ತೇನೆ.

Sri P. A. PAWASHE.—May I know whether persons other than the Scheduled Castes and the Scheduled Tribes and ex-servicemen, come forward to cultivate the lands ? If so whether they would be kind enough to grant these reserve lands to them ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಎಸ್.ಸಿ. ಹಾಗೂ ಎಸ್.ಟಿ. ವರ್ಗದವರಿಗೆ ಎಷ್ಟು ಜಮೀನು ಕೊಡಬೇಕು ಎನ್ನುವುದು ವಿಧಾಯಕವಾಗಿದೆ. ಅದಕ್ಕೆ ಮೇಲ್ಪಟ್ಟು ಜಮೀನು ಹಂಚುವಾಗ ಆಲ್ಲಿ ಯಾರೂ ಈ ವರ್ಗದವರು ಇಲ್ಲ ಎಂದು ತಿಳಿದು ಬಂದರೆ ಆಗ ಇತರರಿಗೆ ಕೊಡಬಹುದೇ ಎನ್ನುವುದನ್ನು ಯೋಚನೆ ಮಾಡುವುದಕ್ಕೆ ಸಾಧ್ಯವಿದೆ.